ಉಪಾಧ್ಯಕ್ಷರು : ಮಾನ್ಯ ರಾಜಶೇಖರ ಶೀಲವಂತರವರೆ, ನರ್ಸರಿ ಪ್ರಾರಂಭಿಸಲು ಒಂದು ಲಕ್ಷ ರೂಪಾಯಿಗಳ ಅನುದಾನ ಒದಗಿಸಲಾಗಿದೆಯೆಂದು ಮಾನ್ಯ ಸಚಿವರು ಹೇಳಿದ್ದಾರಲ್ಲ. ನೀವು ಈಗ ಹೊಸ ಸದಸ್ಯರಾಗಿದ್ದೀರಿ, ಒಂದೇ ತಿಂಗಳಿನಲ್ಲಿ ಎಲ್ಲವನ್ನೂ ಮಾಡುವುದಕ್ಕಾಗುವುದಿಲ್ಲ, ಸ್ವಲ್ಪ ಸಮಾಧಾನದಿಂದ ಕೇಳಿ.

ಶ್ರೀ ಡಿ. ಮಂಜುನಾಥ್ : ಬೇಕಾದರೆ ನಾನು ಅಲ್ಲಿಗೆ ಬರುತ್ತೇನೆ, ಏನು ಮಾಡಬೇಕೆಂಬುದನ್ನು ನೋಡೋಣ.

## ಮೀನುಗಾರರಿಗೆ ಮನೆಗಳನ್ನು ಒದಗಿಸುವುದು

194 -(1041) ಶ್ರೀ ಬಿ. ಶಿವರಾಂ (ಗಂಡಸೀ) : ಮಾನ್ಯ ಮೀನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *1996-97, 97-98 ಮತ್ತು 98-99ನೇ ಸಾಲುಗಳಲ್ಲಿ ರಾಜ್ಯದಲ್ಲಿನ ಮೀನುಗಾರರಿಗೆ ಮನೆಗಳನ್ನು ಒದಗಿಸಲು ಹೊಂದಿದ್ದ ಗುರಿ ಮತ್ತು ಸಾಧಿಸಿದ ಪ್ರಗತಿ ಎಷ್ಟು? (ಜಿಲ್ಲಾವಾರು ಮಾಹಿತಿ ಒದಗಿಸುವುದು).*

ಆ) *ಮನೆಯ ಬೇಡಿಕೆಗಾಗಿ ಇಲಾಖೆಗೆ ಬಂದಿರುವ ಪ್ರಸ್ತಾಪನೆಗಳೆಷ್ಟು? ಅವುಗಳಿಗೆ ಮಂಜೂರಾತಿ ದೊರೆಯುತ್ತದೆಯೇ ಮತ್ತು ತೆಗೆದುಕೊಂಡಿರುವ ಕ್ರಮಗಳೇನು?*

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ (ಮೀನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು) :

| ಅ) | ಆರ್ಥಿಕ | | ಭೌತಿಕ | |
|---|---|---|---|---|
| | ಗುರಿ | ಸಾಧನೆ | ಗುರಿ | ಸಾಧನೆ |
| 1996-97 | 360.00 | 60.00 | 710 ಉಳಿಕೆ ಮನೆಗಳು<br>900 ಹೊಸ ಮನೆಗಳು | <br>400 ಮನೆಗಳು |
| 1997-98 | 300.00 | 285.80 | 650 ಹೊಸ ಮನೆಗಳು<br>1110 ಮನೆಗಳಿಗೆ ಉಳಿಕೆ ಹಣ ಬಿಡುಗಡೆ | 650 ಹೊಸ ಮನೆಗಳು<br>840 ಮನೆಗಳಿಗೆ ಉಳಿಕೆ ಹಣ ಬಿಡುಗಡೆ |
| 1998-99 | 200.00 | - | 920 ಮನೆಗಳಿಗೆ ಉಳಿಕೆ ಹಣ.<br>850 ಹೊಸಮನೆಗಳು | ಇನ್ನೂ ಆಗಿಲ್ಲ. |
| | | | (ಜಿಲ್ಲಾವಾರು ಮಾಹಿತಿ ಲಗತ್ತಿಸಲಾಗಿದೆ) | |

ಆ) ಒಟ್ಟು ಸ್ವೀಕೃತವಾಗಿರುವ 8894 ಅರ್ಜಿಗಳಲ್ಲಿ 3449 ಮನೆಗಳಿಗೆ ಮಂಜೂರಾತಿ ನೀಡಲಾಗಿದ್ದು, ಉಳಿದ ಮನೆಗಳನ್ನು ಹಂತ ಹಂತವಾಗಿ ಅನುದಾನದ ಲಭ್ಯತೆಗೆ ಅನುಗುಣವಾಗಿ ಮಂಜೂರಾತಿ ನೀಡಲಾಗುವುದು.

**ಚುಕ್ಕೆ ಗುರುತಿನ ಪ್ರಶ್ನೆ - 1041**

**1996-97, 97-98 ಮತ್ತು 98-99 ಸಾಲುಗಳಲ್ಲಿ ಹೊಂದಿದ್ದ ಗುರಿ ಮತ್ತು ಸಾಧಿಸಿದ ಪ್ರಗತಿಯ ಬಗ್ಗೆ ಜಿಲ್ಲಾವಾರು ಮಾಹಿತಿ.**

1) 1996-97-400 ಮನೆಗಳು ಮಂಜೂರು ಆಗಿರುತ್ತದೆ. ಇವುಗಳ ಜಿಲ್ಲಾವಾರು ವಿವರ.

| ಕ್ರ. ಸಂ. | ಜಿಲ್ಲೆ | ಮನೆಗಳ ಸಂಖ್ಯೆ |
|---|---|---|
| 1. | ಬಳ್ಳಾರಿ | 55 |
| 2. | ಗದಗ | 10 |
| 3. | ಉಡುಪಿ | 140 |
| 4. | ದಾವಣಗೆರೆ | 100 |
| 5. | ಶಿವಮೊಗ್ಗ | 25 |
| 6. | ಉತ್ತರ ಕನ್ನಡ | 70 |
| | | **400** |

II 1997-98 - 650 ಮನೆಗಳು ಮಂಜೂರು ಆಗಿರುತ್ತದೆ - ಇವುಗಳ ಜಿಲ್ಲಾವಾರು ವಿವರ

| ಕ್ರ. ಸಂ. | ಜಿಲ್ಲೆ | ಮನೆಗಳ ಸಂಖ್ಯೆ |
|---|---|---|
| 1. | ಮಂಗಳೂರು | 30 |
| 2. | ಉಡುಪಿ | 170 |
| 3. | ಉತ್ತರ ಕನ್ನಡ | 125 |
| 4. | ಮೈಸೂರು | 50 |
| 5. | ಹಾಸನ | 50 |
| 6. | ದಾವಣಗೆರೆ | 30 |
| 7. | ಶಿವಮೊಗ್ಗ | 20 |
| 8. | ಕೋಲಾರ | 125 |
| 9. | ಬಿಜಾಪುರ | 20 |
| 10. | ಚಿಕ್ಕಮಗಳೂರು | 10 |
| 11. | ಹಾವೇರಿ | 20 |
| | | **650** |

III 98-99ನೇ ಸಾಲಿಗೆ ಇನ್ನು ಮನೆಗಳು ಮಂಜೂರು ಆಗಿರುವುದಿಲ್ಲ.

ಶ್ರೀ ಬಿ. ಶಿವರಾಂ : ಮಾನ್ಯ ಉಪಾಧ್ಯಕ್ಷರೆ, ನಾನು ಕೇಳಿರುವ ವಿಚಾರದ ಬಗ್ಗೆ ಮಾನ್ಯ ಸಚಿವರು ಆರ್ಥಿಕ ಮತ್ತು ಭೌತಿಕ ಗುರಿ ಸಾಧನೆಗಳ ಬಗ್ಗೆ ಮಾಹಿತಿ ಕೊಟ್ಟಿದ್ದಾರೆ. ಒಂದು ವಿಚಾರವೇನೆಂದರೆ, ಆರ್ಥಿಕ ಗುರಿ ವರ್ಷದಿಂದ ವರ್ಷಕ್ಕೆ ಕಡಿಮೆಯಾಗುತ್ತಾ ಬರುತ್ತಿದ್ದು ಏಕೆ ಈ ರೀತಿ ಆಗುತ್ತಿದೆಯೆಂಬುದಕ್ಕೆ ಕಾರಣ ಗೊತ್ತಾಗಿಲ್ಲ. ಎರಡನೆಯದಾಗಿ, 1997-98ನೇ ಸಾಲಿಗೆ ಕೇಂದ್ರ ಸರ್ಕಾರದಿಂದ ಎಷ್ಟು ಹಣ ಬರಬೇಕಾಗಿತ್ತು, ಆ ಹಣ ಬಂದಿದೆಯೇ?

6.50 ಪಿ.ಎಂ.

ಮೂರನೆಯದು ಇಲ್ಲಿಯವರೆಗೆ ಈ ಇಲಾಖೆಯಲ್ಲಿ ಆಗಿರತಕ್ಕಂಥ ಸಾಧನೆ ಎಷ್ಟೆಂದರೆ 3,449 ಮನೆಗಳು ಅಷ್ಟೇ. ಅರ್ಜಿ ಬಂದಿರುವುದು 8,894 ಎನ್ನುವುದನ್ನು ಹೇಳಿದ್ದಾರೆ. ಅಂದರೆ ಉಳಿದಿರತಕ್ಕಂಥ ಅರ್ಜಿ ಸರ್ಕಾರದಲ್ಲಿ ಇಲ್ಲಿಯವರೆಗೆ 5,445. ಅದಕ್ಕೆ ಏನಾದರೂ ಮುಕ್ತಿ ಇದೆಯೇ? ಯಾವಾಗ ಇದೆ? ಎಷ್ಟು ದಿವಸದಲ್ಲಿ ಆಗುತ್ತದೆ?

ಶ್ರೀ ಕೆ. ಜಯಪ್ರಕಾಶ್ ಹೆಗಡೆ : ಮಾನ್ಯ ಉಪಾಧ್ಯಕ್ಷರೆ, ಈ ಕಾರ್ಯಕ್ರಮ ರಾಜ್ಯ ಮತ್ತು ಕೇಂದ್ರ ಸರ್ಕಾರದ ಜಂಟಿ ಯೋಜನೆಯಲ್ಲಿ ಆಗುತ್ತದೆ. ಕೇಂದ್ರ ಸರ್ಕಾರದವರು ಎಷ್ಟು ಹಣವನ್ನು ಬಿಡುಗಡೆ ಮಾಡುತ್ತಾರೆ, ಅದಕ್ಕೆ ರಾಜ್ಯ ಸರ್ಕಾರದವರು ಮ್ಯಾಚಿಂಗ್ ಗ್ರಾಂಟ್ ಕೊಟ್ಟು ಮನೆಯನ್ನು ಕಟ್ಟಿಸುತ್ತಿದ್ದೇವೆ. ಹಿಂದೆ ಪ್ರತಿವರ್ಷ 100-200 ಮನೆ ಕಟ್ಟಿಸುತ್ತಿದ್ದೆವು. ಈಗ 3,400 ಮನೆಗಳು ಈಗಾಗಲೇ ಆಗಿವೆ. ಈ ಒಂದು ಸಮಸ್ಯೆ ಅರಿತುಕೊಂಡು ಇನ್ನು ಏನು ಐದೂವರೆ ಸಾವಿರ ಅರ್ಜಿಗಳು ಬಾಕಿ ಇವೆ ಅದಕ್ಕೆ ನಾವೇನು ತೀರ್ಮಾನ ತೆಗೆದುಕೊಂಡಿದ್ದೇವೆಂದರೆ ಹಿಂದೆ ಮಾನ್ಯ ವಿಶ್ವೇಶ್ವರ ಹೆಗಡೆಯವರು ಇದೇ ಪ್ರಶ್ನೆ ಕೇಳಿದಾಗ ಇದಕ್ಕೆ ಉತ್ತರ ಹೇಳಿದ್ದೆ. ಹುಡ್ಕೋದಲ್ಲಿ ಲೋನನ್ನು ತೆಗೆದುಕೊಂಡು 5,000 ಅರ್ಜಿಗಳಿಗೆ ಹಣವನ್ನು ಬಿಡುಗಡೆ ಮಾಡಿ ಮನೆಯನ್ನು ಕಟ್ಟಿಸಿಕೊಡುವಂಥಾದ್ದು, ಮುಂದಿನ ವರ್ಷದ ಅನುದಾನದಲ್ಲಿ ಈ ಸಾಲವನ್ನು ತೀರಿಸುವುದು. ಇದಕ್ಕೆ ಈಗಾಗಲೇ ಯೋಜನಾ ಇಲಾಖೆಯವರು ಹಾಗೂ ಹಣಕಾಸಿನ ಇಲಾಖೆಯವರು ನಮ್ಮ ಕಾರ್ಯಕ್ರಮವನ್ನು ಒಪ್ಪಿಕೊಂಡಿದ್ದಾರೆ. ಹುಡ್ಕೋದವರು ಸಹ in principle we have agreed ಎಂದು ಪತ್ರ ಬರೆದಿದ್ದಾರೆ. ಆದುದರಿಂದ ಇದನ್ನು ಮುಂದಿನ ಸಚಿವ ಸಂಪುಟದಲ್ಲಿ ಇಟ್ಟು ಕೆಲವೇ ದಿವಸದಲ್ಲಿ ಇದರ ಬಗ್ಗೆ ಕ್ರಮವನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಬಿ. ಶಿವರಾಂ : ಮಾನ್ಯ ಉಪಾಧ್ಯಕ್ಷರೆ, ಹಿಂದೆ ಹೆಗಡೆಯವರ ಪ್ರಶ್ನೆಗೆ ಉತ್ತರ ಕೊಟ್ಟಿದ್ದು, ಇದೇ ಉತ್ತರವನ್ನು ಅವರೂ ಹೇಳಿದ್ದು, ಈಗಲೂ ಅದೇ ಉತ್ತರವನ್ನು ಹೇಳುತ್ತಿದ್ದಾರೆ. ಆರ್ಥಿಕ ಇಲಾಖೆಯವರು ಅನುಮತಿಯನ್ನು ಕೊಡುತ್ತಿದ್ದಾರೆ, ಮುಂದಿನ ವಾರದಲ್ಲಿ ಕ್ಯಾಬಿನೆಟ್‌ನಲ್ಲಿ ಅಪ್ರೂವ್ ಆಗುತ್ತದೆಂದು ಹೇಳಿದ್ದರು. ಹಾಗಾದರೆ ಆರ್ಥಿಕ ಇಲಾಖೆಯವರು ಅನುಮತಿಯನ್ನು ಕೊಟ್ಟು ಹಣವನ್ನು ಒದಗಿಸಿದ್ದಾರೆಯೇ ಕ್ಯಾಬಿನೆಟ್‌ಗೆ ತಾವು ಎಷ್ಟು ದಿವಸದಲ್ಲಿ ತರುತ್ತೀರಿ? ನಾನು ಉತ್ತರ ಕೇಳುವುದು ಇನ್ನು ಅನುಷ್ಠಾನಕ್ಕೆ ಬರುವುದು ಯಾವಾಗ? ಎಂದು ಸ್ಪಷ್ಟೀಕರಣ ಕೇಳಿದೆ. ಹುಡ್ಕೋದವರು ಒಪ್ಪಿಕೊಂಡಿದ್ದಾರೆಂದರೆ ತಮ್ಮ ಶೇರ್‌ಗೆ ಆರ್ಥಿಕ ಇಲಾಖೆಯವರು ಅನುಮತಿ ಹಾಗೂ ಬಿಡುಗಡೆ ಎರಡು ಆಗಬೇಕು ಅದು ಆಗಿದೆಯೋ?

ಶ್ರೀ ಕೆ. ಜಯಪ್ರಕಾಶ್ ಹೆಗಡೆ : ಮಾನ್ಯ ಉಪಾಧ್ಯಕ್ಷರೇ, ಹುಡ್ಕೋ ಸಾಲ ಕೊಟ್ಟು ನಾವು ಮನೆಗಳನ್ನು ಕಟ್ಟಿಸಿದಾಗ ಆರ್ಥಿಕ ಇಲಾಖೆ ಹಣ ಬಿಡುಗಡೆ ಮಾಡುವಂತಹ ಪ್ರಶ್ನೆ ಬರುವುದಿಲ್ಲ. ನಾವು ಹುಡ್ಕೋದಿಂದ ಹಣವನ್ನು ಪಡೆದುಕೊಂಡು ಮನೆಗಳನ್ನು ಕಟ್ಟಿಸುತ್ತೇವೆ. ಬರುವ ಮುಂದಿನ ವರ್ಷದ ಅನುದಾನದಲ್ಲಿ ಅದನ್ನು ವಾಪಸ್ಸು ಕೊಡುತ್ತಾ ಬರುತ್ತೇವೆ. ಈ ಒಂದು ಕಾರ್ಯಕ್ರಮವನ್ನು ಹಾಕಿದ್ದೇವೆ.

ಶ್ರೀ ಬಿ. ಶಿವರಾಂ: ಹುಡ್ಕೋದವರು 100 ಪರ್ಸೆಂಟ್ ಹಣ ಕೊಡುತ್ತಾರಾ? ಇದು ಒಂದು. 1997-98ನೇ ಸಾಲಿಗೆ ಕೇಂದ್ರ ಸರ್ಕಾರವರು ಹಣ ಬಿಡುಗಡೆ ಮಾಡಿದ್ದಾರಾ?

ಶ್ರೀ ಕೆ. ಜಯಪ್ರಕಾಶ್ ಹೆಗಡೆ : 1997-98ನೇ ಸಾಲಿನ ಹಣವನ್ನು ಕೇಂದ್ರ ಸರ್ಕಾರದವರು ಬಿಡುಗಡೆ ಮಾಡಿದ್ದಾರೆ.

## ರಾಜ್ಯ ಹೆದ್ದಾರಿಯ ಸುಧಾರಣೆ

195 - ಶ್ರೀ ಜಿ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಬಾಗೇಪಲ್ಲಿ-ಕೋಲಾರ-ಬಂಗಾರಪೇಟೆ ರಾಜ್ಯ ಹೆದ್ದಾರಿಯು ಹಾಳಾಗಿದ್ದು ಸಂಚಾರಕ್ಕೆ ಯೋಗ್ಯವಿಲ್ಲದೇ ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?*

ಆ) *ಈ ರಸ್ತೆಯ ಸುಧಾರಣೆಗೆ ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?*

ಇ) *ಈ ರಾಜ್ಯ ಹೆದ್ದಾರಿಯನ್ನು ವಿಶಾಲಗೊಳಿಸುವ ಪ್ರಸ್ತಾಪ ಸರ್ಕಾರದವರ ಮುಂದಿದೆಯೇ?*

ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು) :

ಅ) ರಸ್ತೆಯು ಸಂಚಾರಕ್ಕೆ ಯೋಗ್ಯವಾಗಿದೆ.

ಆ) ರಸ್ತೆ ಸುಧಾರಣೆಗೆ ಮಳೆಹಾನಿ ದುರಸ್ತಿಯಲ್ಲಿ 1996-97 ಮತ್ತು 1997-98ನೇ ಸಾಲಿಗೆ ದುರಸ್ತಿ ಹಾಗೂ ಅಭಿವೃದ್ಧಿಗಾಗಿ ಮಳೆಹಾನಿ ಶೀರ್ಷಿಕೆಯಡಿ ಆಯ್ದ ಭಾಗಗಳಿಗೆ48.00 ಲಕ್ಷ ರೂ.ಗಳನ್ನು ಒದಗಿಸಲಾಗಿದೆ. ಸದರೀ ಕಾಮಗಾರಿಗಳನ್ನು ಟೆಂಡರ್ ಮುಖಾಂತರ ತೆಗೆದುಕೊಂಡು ಪ್ರಗತಿಯಲ್ಲಿರುತ್ತದೆ.

ಇ) ಸದ್ಯಕ್ಕೆ ಪ್ರಸ್ತಾಪ ಇರುವುದಿಲ್ಲ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಮಾನ್ಯ ಉಪಾಧ್ಯಕ್ಷರೇ, ನಾನು ಪ್ರಶ್ನೆಯನ್ನು ಸಂಚಾರಕ್ಕೆ ಯೋಗ್ಯವಿದೆಯೇ ಎಂದು ಕೇಳಿದರೆ ಯೋಗ್ಯವಿದೆ ಎಂದು ಹೇಳಿದ್ದಾರೆ. ಆದರೆ ಅದು ಸಂಚಾರಕ್ಕೆ ಯೋಗ್ಯವಿಲ್ಲ. ಇದು ಒಂದು ಬಹಳ ಪ್ರಮುಖವಾದಂತಹ ರಸ್ತೆ ಅದು ರಾಜ್ಯ ಹೆದ್ದಾರಿ. ರಾಷ್ಟ್ರೀಯ ಹೆದ್ದಾರಿ4 ರಿಂದ7ಕ್ಕೆ ಸುಮಾರು4 ತಾಲ್ಲೂಕುಗಳ ಮೇಲೆ ಹಾದು ಹೋಗಿ ಲಿಂಕ್ ಕೊಡತಕ್ಕಂಥ ಒಂದು ರಸ್ತೆ. ಮತ್ತು ತಮಿಳುನಾಡಿಗೆ ಎಲ್ಲಾದಕ್ಕೂ ಸಂಪರ್ಕ ಇರತಕ್ಕಂಥ ಒಂದು ಪ್ರಮುಖವಾದಂತಹ ರಸ್ತೆ. ಇದು ಸುಮಾರು30-40 ವರ್ಷಗಳಿಂದ ರಿಪೇರಿಯಾಗಿಲ್ಲ, ಟಾರು ಹಾಕಿಲ್ಲ, ಮೋರಿ ರಿಪೇರಿಯಾಗಿಲ್ಲ, ಏನೂ ಇಲ್ಲ. ವಿಪರೀತವಾದಂತಹ ಟ್ರಾಫಿಕ್ ಇರುತ್ತದೆ. ಸುಮಾರು ಸಲ ಇದನ್ನು ಸರ್ಕಾರದ ಗಮನಕ್ಕೆ